# ಕಿವುಡು ಮಗುವಿನೊಂದಿಗೆ ಮನೆಯಲ್ಲಿಯೇ ಕಲಿಯುವುದು ಹೇಗೆ?

Deaf Child Worldwide

ಇಡೀ ಜಗತ್ತಿನಾದ್ಯಂತ ಕೊರೊನಾ ರೋಗಾಣು ಹಬ್ಬಿರುವುದರ ಪರಿಣಾಮವಾಗಿ, ಜಗತ್ತಿನ ಎಲ್ಲೆಡೆ ಶಾಲೆಗಳು ಮುಚ್ಚಿವೆ. ನಿಮ್ಮ ಕಿವುಡು ಮಗು ಸಹ ಶಾಲೆಯಿಲ್ಲವೆಂದು ಮನೆಯಲ್ಲಿಯೇ ಇದ್ದರೆ ಅಥವಾ ಹತ್ತಿರದ ಶಾಲೆಗೂ ಹೋಗಲಾಗದಿದ್ದರೆ, ಇದು ನಿಜಕ್ಕೂ ಕಷ್ಟಕರ ಸಮಯವೇ ಸರಿ. ಮಕ್ಕಳಿಗೆ ಓದುಬರಹ ನಿಂತು ಹೋಗುವುದಲ್ಲ ಎಂಬ ಚಿಂತೆ ನಿಮ್ಮನ್ನು ಕಾಡಬಹುದು. ಆದರೆ, ನೀವು ಮತ್ತು ನಿಮ್ಮ ಕುಟುಂಬದವರು ನಿಮ್ಮ ಕಿವುಡು ಮಗು ತನ್ನ ಕಲಿಕೆಯನ್ನು ಮನೆಯಲ್ಲಿಯೇ ಮುಂದುವರೆಸುವಲ್ಲಿ ಒಂದು ದೊಡ್ಡ ಪಾತ್ರವನ್ನೇ ವಹಿಸಬಹುದು.

ಕಲಿಕೆ ಎಲ್ಲಾ ಸಮಯದಲ್ಲಿಯೂ ನಡೆಯುತ್ತದೆ. ದಿನನಿತ್ಯದ  ಚಟುವಟಿಕೆಗಳಲ್ಲಿ, ಒಟ್ಟಿಗೆ ಕುಳಿತು ಊಟ ಮಾಡುತ್ತ ಚರ್ಚಿಸುವಾಗ, ಆಟವಾಡುವಾಗ ಅಥವಾ ಕುಟುಂಬದ ಸದಸ್ಯರೊಂದಿಗೆ ಮಾತುಕತೆ ನಡೆಸುವಾಗ, ಬಟ್ಟೆ ಒಗೆಯುವಾಗ ಅಥವಾ ಅಡುಗೆ ಮಾಡುತ್ತಿರುವಾಗಲೂ ಕಲಿಕೆ ನಡೆಯುತ್ತಿರುತ್ತದೆ.

ಶಾಲಾ ಶಿಕ್ಷಣ ಮತ್ತು ಮನೆಯಲ್ಲಿ ಕಲಿಕೆ - ಇವೆರಡೂ ಬಹಳ ಭಿನ್ನವಾದ ಸಂಗತಿಗಳು. ಆದರೆ ಎರಡೂ ಅಷ್ಟೇ ಮುಖ್ಯ. ಮೊದಲಿಗೆ, ಮನೆಯಲ್ಲಿ ಶಾಲೆಯ ವಾತಾವರಣವನ್ನೇ ಕಲ್ಪಿಸುವ ಪ್ರಯತ್ನದ ಬಗ್ಗೆ ಚಿಂತಿಸಬೇಡಿ. ಬದಲಿಗೆ, ನಿಮ್ಮ ಮಗು ಸಹಜವಾಗಿ ಕಲಿಯುವಂತಹ ವಾತಾವರಣವನ್ನು ಕಲ್ಪಿಸುವ ಬಗ್ಗೆ ವಿಚಾರ ಮಾಡಿ. ಸದ್ಯದ ಪರಿಸ್ಥಿತಿಯಲ್ಲಿ, ಕೈಗಳನ್ನು ಸರಿಯಾಗಿ ಹೇಗೆ ತೊಳೆಯಬೇಕು ಎಂದು ತೋರಿಸಿ, ಯಾಕೆ ತೊಳೆಯಬೇಕು ಎನ್ನುವುದನ್ನು ತಿಳಿಸಿ ಹೇಳುವುದು  ಪುಸ್ತಕದಿಂದ ಕಲಿಯುವಷ್ಟೇ ಮುಖ್ಯ. ನಿಮ್ಮ ಮಗುವಿನಲ್ಲಿ ಜೀವನ ಕೌಶಲಗಳನ್ನು  ಮೂಡಿಸಿ ಬೆಳೆಸುವುದಕ್ಕೆ ಅನೇಕ ಉಪಯುಕ್ತ ವಿಧಾನಗಳಿವೆ:

ವಸ್ತುಗಳನ್ನು ಎಣಿಸುವುದು ಮತ್ತು ನಿಮ್ಮ ಬೆರಳುಗಳಿಂದ ಸಂಖ್ಯೆಗಳನ್ನು ತೋರಿಸುವುದು

ಮಗುವಿಗೆ ಅಡುಗೆ ಸಾಮಗ್ರಿಗಳನ್ನು ತೋರಿಸಿ, ವಿವರಿಸುತ್ತ, ಅಡುಗೆ ಮಾಡುವಾಗ ಅವು ಹೇಗೆ ಬದಲಾಗುತ್ತವೆ ಎಂಬುದನ್ನು ವಿವರಿಸುವುದು

ಮಗು ತನ್ನ ಹೆಸರಿನಲ್ಲಿರುವ ಅಕ್ಷರಗಳನ್ನು ಗುರುತಿಸುವುದಕ್ಕೆ ಸಹಾಯ ಮಾಡುವುದು

ಸಮಯ ಎಷ್ಟಾಯಿತು ಎಂದು ಹೇಳುವುದನ್ನು ಮಗುವಿಗೆ ಕಲಿಸುವುದು

ಮಗುವಿಗೆ ಮರಗಳು, ಬೆಟ್ಟಗಳು, ನದಿಗಳು, ಹಣ್ಣುಗಳು, ತರಕಾರಿಗಳು, ಪ್ರಾಣಿ ಪಕ್ಷಿಗಳ  ಹೆಸರುಗಳನ್ನು ಹೇಳುವುದು. ಒಂದೊಂದಕ್ಕೂ ಒಂದೊಂದು ಸಂಕೇತ ನಿಗದಿ ಮಾಡುವುದು. ಅಥವಾ ವಸ್ತುಗಳ ಬಣ್ಣ, ಆಕಾರ,  ಮೇಲ್ಮೈ, ರುಚಿ ಮತ್ತು ವಾಸನೆಗಳನ್ನು ತಿಳಿಸಿಕೊಡಲು ಅವುಗಳನ್ನು ವಿವರಿಸುವುದು

ನಿಮ್ಮ ಮಗು ನಿಮ್ಮ ಜೊತೆ ಮತ್ತು ಕುಟುಂಬದ ಇತರ ಸದಸ್ಯರೊಂದಿಗೆ ಸಂವಹನ ನಡೆಸುತ್ತ ಸುಮ್ಮನೆ ಕಾಲ ಕಳೆಯುತ್ತಿದ್ದಾಗಲೂ, ಆಟವಾಡುತ್ತಿದ್ದಾಗಲೂ ಅಥವಾ ನೀವು ನಿತ್ಯದ ಕೆಲಸಗಳನ್ನು ಮಾಡುತ್ತಿರುವಾಗ ನಿಮ್ಮ ಜೊತೆಯಲ್ಲಿರುವಾಗಲೂ, ಕಲಿಯುತ್ತಿರುತ್ತದೆ.

# ಕಿವುಡು ಮಗುವಿನೊಂದಿಗೆ ಮನೆಯಲ್ಲಿಯೇ ಕಲಿಯುವುದು ಹೇಗೆ?

Deaf Child Worldwide

## ಸಂವಹನ ನಡೆಸುವುದು

ಮಗು ಮನೆಯಲ್ಲಿ ನಿಮ್ಮ ಜೊತೆ ಇದ್ದಾಗ,ಅದರ ಬಳಿ ಶ್ರವಣಸಾಧನ ಅಥವಾ ಬೇರೆ ಯಾವುದೇ ತಂತ್ರಜ್ಞಾನ ಆಧಾರಿತ ಸಾಧನ ಇದ್ದರೆ, ಅದನ್ನು ಆದಷ್ಟು ಮಟ್ಟಿಗೆ ಬಳಸುವಂತೆ ನೋಡಿಕೊಳ್ಳಿ.

ಮಗುವಿನೊಂದಿಗೆ ತಾಳ್ಮೆಯಿಂದಿರಿ. ಅದು ನಿಮ್ಮನ್ನು ಅರ್ಥಮಾಡಿಕೊಳ್ಳಲು ಕಷ್ಟ ಪಡುತ್ತಿದೆ ಅನ್ನಿಸಿದರೆ, ಅದೇ ಅದೇ ಪದಗಳನ್ನು ಬಳಸಿ ಹೇಳಿದ್ದನ್ನೇ ಹೇಳಬೇಡಿ. ಬದಲಿಗೆ, ಅದರ ಅರ್ಥವನ್ನುತಿಳಿಸಲು ಬೇರೆ ವಿಧಾನವನ್ನು ಕಂಡುಹಿಡಿಯಿರಿ

ನಿಮ್ಮ ಕಿವುಡು ಮಗುವಿನ ಜೊತೆ ಮಾತನಾಡಲು ನಿಮಗೆ ಸಂಜ್ಞಾಭಾಷೆ ಬರಲೇಬೇಕು ಎಂದೇನಿಲ್ಲ. ನೀವು ವಸ್ತುಗಳತ್ತ ಬೆರಳು ತೋರಿಸಿ, ಸನ್ನೆಗಳನ್ನು ಮಾಡಬಹುದು ಅಥವಾ ನಿಮ್ಮದೇ ರೀತಿಯ ಸನ್ನೆಗಳನ್ನು ರೂಪಿಸಬಹುದು.

ಸಾಮಾನ್ಯ ವೇಗದಲ್ಲಿ ಮಾತಾಡಿ (ಅತಿ ವೇಗ ಅತಿ ನಿಧಾನ ಬೇಡ). ಸನ್ನೆ ಮಾಡುವಾಗ ಅರಚಬೇಡಿ ಅಥವಾ ಜೋರಾಗಿ ಮಾತಾಡಬೇಡಿ. ನೆನಪಿಡಿ – ಮಗುವಿಗೆ ಕಿವುಡಿರಬಹುದು. ಆದರೆ ಅದು ನಿಮ್ಮನ್ನು ಅರ್ಥಮಾಡಿಕೊಳ್ಳಲು ನಿಮ್ಮ ತುಟಿಚಲನೆ ನೋಡುತ್ತದೆ, ನಿಮ್ಮ ಮುಖಭಾವ ನೋಡುತ್ತದೆ.

ನಿಮ್ಮ ಮಗು ಹೇಗೆ ವರ್ತಿಸಬೇಕು, ಕಲಿಯಬೇಕೆಂದು ನೀವು ನಿರೀಕ್ಷಿಸುತ್ತೀರೋ, ಅದನ್ನು ಮಗುವಿಗೆ ಸಂವಹನದ ಮೂಲಕ ಸ್ಪಷ್ಟಪಡಿಸಿ. ಆದರೆ ನಿಮ್ಮ ನಿಲುವು ಸಡಿಲಿಸಲು ತಯಾರಿರಬೇಕು. ಒಂದೊಂದು ಕುಟುಂಬದ ಕಲಿಕಾ ಮಾದರಿ ಒಂದೊಂದು ರೀತಿ ಇರುತ್ತದೆ. ಸರಿ – ತಪ್ಪು ಎಂಬುದು ಇರುವುದಿಲ್ಲ. ಒಂದಷ್ಟು ಸರಳ ನಿಯಮಗಳನ್ನು ಒಪ್ಪಿಕೊಳ್ಳಿ. ಆದರೆ ಅವುಗಳಿಂದ ಪ್ರತಿಫಲ ಇಲ್ಲ ಅನ್ನಿಸಿದರೆ, ಅವುಗಳ ಬಗ್ಗೆ ಮರುಚಿಂತನೆ ಮಾಡುವುದಕ್ಕೆ ಸಿದ್ಧರಾಗಿರಿ

ನಿಮ್ಮ ಮಗು ಏನೋ ತಪ್ಪು ಮಾಡಿದಾಗ ಅದನ್ನು ಬೈಯಬೇಡಿ ಅಥವಾ ಶಿಕ್ಷಿಸಬೇಡಿ. ಬದಲಿಗೆ, ಸರಿಯಾಗಿ ಮಾಡಿದಾಗ ಹೊಗಳುವ ಮೂಲಕ ಅದರ ಆತ್ಮವಿಶ್ವಾಸವನ್ನು ಹೆಚ್ಚಿಸಿ.

ನೆನಪಿಡಿ – ನಿಮ್ಮ ಮಗು ತನಗೆ ಅರ್ಥವಾಗದ ಬದಲಾವಣೆಗಳಿಂದ ಹತಾಶೆಗೆ ಮತ್ತು ಚಿಂತೆಗೆ ಒಳಗಾಗಬಹುದು.

## ದಿನನಿತ್ಯದ ಕಾರ್ಯಕ್ರಮ

ಹೆಚ್ಚಿನ ಮಕ್ಕಳಿಗೆ ಪ್ರತಿನಿತ್ಯ ಒಂದು ಕಾರ್ಯಕ್ರಮವಿದ್ದರೆ, ಬಹಳ ಸಂತೋಷ. ಶಾಲೆಗಳೂ ಮುಚ್ಚಿಹೋಗಿ, ಸುತ್ತಮುತ್ತಲಿನ ವಾತಾವರಣ ಭಿನ್ನ ಎಂದು ಅನ್ನಿಸತೊಡಗುವಾಗ, ಒಂದು ದಿನನಿತ್ಯದ ಕಾರ್ಯಕ್ರಮವಿದ್ದರೆ ಅವರಿಗೆ ಸುರಕ್ಷತೆಯ ಭಾವ ಮೂಡುತ್ತದೆ. ದಿನನಿತ್ಯ ಮಾಡಬೇಕಾದ ಆ ಕೆಲಸ ಅಥವಾ ಕಾರ್ಯಕ್ರಮ ಯಾವುದೆಂದು ಇಬ್ಬರೂ ಒಟ್ಟಿಗೆ ಕುಳಿತು ಇತ್ಯರ್ಥ ಮಾಡಿಕೊಳ್ಳಿ. ಅಥವಾ ಮಗುವಿಗೆ ಅದನ್ನು ವಿವರಿಸಿ ತಿಳಿಸಿ ಮತ್ತು ಬರೆದು ತೋರಿಸಿ ಅಥವಾ ಪದಗಳು ಅಥವಾ ಚಿತ್ರಗಳನ್ನು ಬರೆದು ತೋರಿಸಿ.

# ಕಿವುಡು ಮಗುವಿನೊಂದಿಗೆ ಮನೆಯಲ್ಲಿಯೇ ಕಲಿಯುವುದು ಹೇಗೆ?

Deaf Child Worldwide

## ಕಲಿಕೆ

**ಬಹಳಷ್ಟು ಮಕ್ಕಳು ತಮ್ಮ ಯೋಚನೆ - ವಿಚಾರಗಳನ್ನು ಬೇರೆಯವರೊಂದಿಗೆ ಬೆರೆತು ಹಂಚಿಕೊಂಡಾಗ, ಬಹಳ ಚೆನ್ನಾಗಿ ಕಲಿಯುತ್ತಾರೆ.**



ನಿಮ್ಮ ಮನೆಯಲ್ಲಿನ ಎಲ್ಲಾ ಚಟುವಟಿಕೆಗಳಲ್ಲಿ ನಿಮ್ಮ ಕಿವುಡು ಮಗುವನ್ನು ಸೇರಿಸಿಕೊಳ್ಳಿ.

ಅದರಲ್ಲಿ ಸರಳವಾದ ಜವಾಬ್ದಾರಿಗಳೂ ಇರಬೇಕು;

ಜೊತೆಗೆ ಆಟಗಳು ಮತ್ತು ಕ್ರೀಡೆಗಳೂ ಸೇರಿದಂತೆ ಮನಸ್ಸಿಗೆ ಮುದ ತರುವ ಚಟುವಟಿಕೆಗಳೂ ಇರಬೇಕು.





ನಿಮ್ಮ ಬಳಿ ಯಾವುದಾದರೂ ಪುಸ್ತಕಗಳು ಅಥವಾ ಚಿತ್ರಗಳಿದ್ದರೆ, ಅವುಗಳನ್ನು ನಿಮ್ಮ ಕಿವುಡು ಮಗುವಿಗೆ ತೋರಿಸಿ - ಹಂಚಿಕೊಳ್ಳಿ. ಕಥೆಯನ್ನು ಓದುತ್ತಾ ಸಾಗಿದಂತೆ, ಪರಸ್ಪರರಿಗೆ  ಸನ್ನೆಗಳು - ಸಂಕೇತಗಳನ್ನು ಕಲಿಸಿರಿ ಮತ್ತು ಕಲಿಯಿರಿ



ನಿಮ್ಮ ಮಗುವಿಗಾಗಿ ಒಂದು ಕಥೆ ಕಟ್ಟಿ  ಹೇಳಿ ಅಥವಾ ನಿಮ್ಮ  ಕುಟುಂಬದ್ದೇ ಒಂದು ಕಥೆ ಹಂಚಿಕೊಳ್ಳಿ. ಮಕ್ಕಳಿಗೆ ಸವಾಲೆಂದರೆ ಇಷ್ಟ.  ಮನೆಯ ಸುತ್ತಮುತ್ತಲಿಂದ  ಎಷ್ಟು ವಸ್ತುಗಳನ್ನು ಒಂದು ಪುಟ್ಟ ಡಬ್ಬಿ ಅಥವಾ ಚೀಲದಲ್ಲಿ  ಸಂಗ್ರಹಿಸಿ ತರುತ್ತಾರೆ, ನೋಡಿ. ಅವರಿಗೆ ಏನೇನು ಸಿಕ್ಕವು ಮತ್ತು ಎಲ್ಲಿ ಸಿಕ್ಕವು ಎಂಬುದನ್ನು ವಿವರಿಸಲು ಹೇಳಿ.

## ವರ್ತನೆ

ಮಕ್ಕಳ ದೈಹಿಕ ಆರೋಗ್ಯವನ್ನು ನೋಡಿಕೊಳ್ಳುವುದು ಎಷ್ಟು ಮುಖ್ಯ ಎನ್ನುವುದು ನಮಗೆಲ್ಲಾ ತಿಳಿದೇ ಇದೆ. ಅವರ ಮಾನಸಿಕ ಆರೋಗ್ಯವೂ ಸಹ ಅಷ್ಟೇ ಮುಖ್ಯವಾದದ್ದು. ಅನೇಕ ಮಕ್ಕಳು ಸದ್ಯದ ಘಟನೆಗಳ ಬಗ್ಗೆ, ತಮ್ಮ ನಿತ್ಯದ ದಿನಚರಿಯಲ್ಲಿ ಆಗಿರುವ ಬದಲಾವಣೆಗಳಿಂದಾಗಿ ಆತಂಕಗೊಂಡಿದ್ದಾರೆ.

ಅವರ ನಿತ್ಯಜೀವನದಲ್ಲಿ ಮತ್ತು ಅವರ ಸುತ್ತಮುತ್ತಲಿನವರಲ್ಲಿ ಆಗಿರುವ ಬದಲಾವಣೆಯಿಂದ ಅವರಲ್ಲಿ  ಒತ್ತಡ ಉಂಟಾಗಿದೆಯೆ ಎಂಬುದನ್ನು ಗಮನಿಸಿ. ನೀವೇ ಒತ್ತಡಕ್ಕೆ ಒಳಗಾಗಿರಬಹುದು; ಆದರೆ ನಿಮ್ಮ ಮಗುವಿಗೆ ಅದರ ಬಗ್ಗೆ ಅರಿವಾದರೂ, ಏನು ಆಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳದಿರಬಹುದು.

- ಅವರ ವರ್ತನೆಯಲ್ಲಿ ಬದಲಾವಣೆ ಆಗಬಹುದು
- ಹೆಚ್ಚು ಅಳಬಹುದು
- ತಿನ್ನುವ ಅಥವಾ ಆಟದ ಇಚ್ಛೆ ತೋರಿಸದಿರಬಹುದು
- ಬಹಳ  ದುಃಖಿತರಾಗಬಹುದು

→ ನಿಮ್ಮ ಕಿವುಡು ಮಗುವಿನ ಜೊತೆ ಕುಳಿತು ಕಲಿಯುವುದು ಸಂತಸದ ಕ್ಷಣವಾಗಬಹುದು!  ಸಂವಹನ ನಡೆಸಲು ಇರುವ ಅತ್ಯುತ್ತಮ ಮಾರ್ಗಗಳನ್ನು  ಒಟ್ಟಿಗೆ ಕುಳಿತು ಕಲಿಯಿರಿ - ಕಲಿಸಿರಿ!